ಅವಲಂಬಿಸಿದ್ದು, ಅದನ್ನು ಚನ್ನಪಟ್ಟಣ ಎಂ.ಯು.ಎಸ್.ಎಸ್.ನಲ್ಲಿ ಸ್ಥಾಪಿಸಲು ಕಳಿಸಿಕೊಡಲಾಗುವುದು.

Sri. Sadath Ali Khan : Channapatna taluk is in the third position in the whole of Karnataka State in having highest number of irrigation pumpsets. ಅದಕ್ಕೆ ಈ ಅಕ್ಕೂರ್‌ಮೋಳಿ ಸ್ಟೇಷನ್‌ದು ಡೀಟೇಲ್ಸ್ ಬಂದಿದೆ. ಅದು 1990-91ರಲ್ಲಿ ಸ್ಯಾಂಕ್ಷನ್ ಆಗಿದೆ. But, till to-day it is not completed. 1993-94ರಲ್ಲಿ ಅದನ್ನು ಕಮಿಷನ್ ಮಾಡುತ್ತೇವೆ ಎಂದು ತಾವು ರಿಪ್ಲೈ ಕೊಟ್ಟಿದ್ದೀರಿ. ಮತ್ತೆ ಈಗ 12.5 ಎಂ.ವಿ.ಎ ಚನ್ನಪಟ್ಟಣ್ಕ ಲಾಸ್ಟ್‌ಮಂಥ್ 23 ಜನವರಿಯಲ್ಲಿ ಕೊಟ್ಟಿದ್ದೀರಿ. ಇನ್ನೊಂದು 12.5 ಎಂ.ವಿ.ಎ ಟ್ರಾನ್ಸ್‌ಫಾರ್ಮರ್ ಕೊಟ್ಟರೆ ಈ ವೋಲ್ಟೇಜ್ ಪ್ರಾಬ್ಲಮ್ ಏನು ಇದೆ ಇದು ಕಡಿಮೆಯಾಗುತ್ತದೆ. ಬೇಕಾದಷ್ಟು ಕಡೆ ವೋಲ್ಟೇಜ್ ಪ್ರಾಬ್ಲಮ್ ಇದೆ. ಪ್ರತಿ 3 ದಿವಸಕ್ಕೆ ಒಂದು ಟ್ರಾನ್ಸ್‌ಫಾರ್ಮರ್ ಬರ್ನ್ ಆಗುತ್ತಿದೆ. 25 ಕೆ.ವಿ.ಎ. ಬರ್ನ್ ಆಗುತ್ತದೆ, ಇಲ್ಲವೆ, 63 ಕೆ.ವಿ.ಎ. ಬರ್ನ್ ಆಗುತ್ತದೆ. ಇಲ್ಲವೇ 100 ಕೆ.ವಿ.ಎ. ಬರ್ನ್ ಆಗುತ್ತದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ನಾನು ಸ್ಟ್ಯಾಟಿಸ್ಟಿಕ್ಸ್ ತೆಗೆದುಕೊಂಡು ನೋಡಿದಾಗ ಪ್ರತಿ ಮೂರು ದಿವಸಕ್ಕೆ ಒಂದು ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗುತ್ತದೆ. ಮತ್ತೆ ಈಗ ಟ್ರಾನ್ಸ್‌ಫಾರ್ಮರ್ ಇಲ್ಲದೆ ಟಿಲಿವಿಷನ್ಸ್, ಪಂಪ್‌ಸೆಟ್ಸ್, ರೇಡಿಯೋಗಳು ಎಲ್ಲಾ ಬರ್ನ್ ಆಗುತ್ತಿವೆ. ನಾನು ಹಳ್ಳಿಗೆ ಹೋದರೆ ಈ ಪವರ್ ವಿಷಯದಲ್ಲಿ ಜನ ನಮ್ಮ ಮೇಲೆ ಗಲಾಟೆ ಮಾಡುತ್ತಾರೆ. ಅದಕ್ಕೆ ಒಂದು ಅಡಿಷನಲ್ 12.5 ಎಂ.ವಿ.ಎಯನ್ನು ಚನ್ನಪಟ್ಟಣ ಸ್ಟೇಷನ್‌ಗೆ ಒದಗಿಸಿ ಮತ್ತೆ ಈ ಅಕ್ಕೂರ್‌ಮೋಳಿ ಸ್ಟೇಷನ್ ಇದೆಯಲ್ಲಾ, ಅದು ಸಹ ಆರ್ಟಿಯರ್ ಆಗಿ ಕಂಪ್ಲೀಷನ್ ಆಗುವ ಹಾಗೆ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಚನ್ನಪಟ್ಟಣದಲ್ಲಿ ವಿದ್ಯುಚ್ಛಕ್ತಿ ವಿತರಣಾ ವ್ಯವಸ್ಥೆ ಬಹಳ ಕಠಿಣವಾಗಿದೆ ಎಂದು ಹೇಳಿ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ಆಗಿಂದಾಗ್ಗೆ ತರುತ್ತಿದ್ದಾರೆ. ಅಲ್ಲಿ 1993-94 ನೇ ಸಾಲಿನ ವಾರ್ಷಿಕ ಯೋಜನೆಯಲ್ಲಿ ಒಂದು 12 ಎಂ.ವಿ.ಎ. ಟ್ರಾನ್ಸ್‌ಫಾರ್ಮರನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಆದರೆ ದುರದೃಷ್ಟವಶಾತ್ 12.5 ಎಂ.ವಿ.ಎ. ವಿದ್ಯುತ್ ಟ್ರಾನ್ಸ್‌ಫಾರ್ಮರ್ ಆರ್ಡರ್ ಮಾಡಿದ್ದೇವೆ. ಅದು ಇನ್ನೂ ನಮ್ಮ ಮಂಡಲಿಗೆ ಬಂದಿಲ್ಲ. ಅದು ಬಂದ ತಕ್ಷಣ ಅದನ್ನು ಚನ್ನಪಟ್ಟಣದಲ್ಲಿ ಇನ್‌ಸ್ಟಾಲ್ ಮಾಡುತ್ತೇವೆ. ಎರಡನೆಯದಾಗಿ ಅಕ್ಕೂರ್‌ಮೋಳಿಯಲ್ಲಿ 102 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಒಂದು 66.11 ಕೆ.ವಿ. ಉಪಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ. ಟಿ.ಕೆ. ಹಳ್ಳಿಯಿಂದ ಅಕ್ಕೂರ್‌ಮೋಳಿಗೆ ಸುಮಾರು 20 ಕಿಲೋಮಿಟರ್ ದೂರ ಇದೆ. 66 ಕೆ.ವಿ. ಪ್ರಸರಣ ಮಾರ್ಗ ನಿರ್ವಹಿಸಲು ಉದ್ದೇಶಿಸಲಾಗಿದೆ. ಮೇಲಿನ ನಿರ್ಮಾಣ ಕೆಲಸವನ್ನು 1993-94ನೇ ಇಸವಿಯಲ್ಲಿ ಸ್ಥಾಪನೆ ಮಾಡುತ್ತೇವೆ.

ವಿಷಯ : ಗುಬ್ಬಿ ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳು.

Q : 1494

ಶ್ರೀ ಜಿ. ಎಸ್. ಶಿವನಂಜಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ

ದಯವಿಟ್ಟು · ಉತ್ತರಿಸುವರೆ?

ಅ) ಗುಬ್ಬಿ ತಾಲ್ಲೂಕಿನ ನಾಗಸಂದ್ರದಿಂದ ಸಿ. ಎಸ್. ಪುರಕ್ಕೆ ಹೋಗುವ ರಸ್ತೆಯು ಬಲಗಡೆಗೆ ಕವಲೊಡೆದುಕೊಂಡು ಅಡಿಕೆಕೆರೆ, ಇಡಗೂರು ಮಾರ್ಗವಾಗಿ ಮಾದಿನಹಳ್ಳಿಗೆ ಹೋಗುವ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳುವಂತೆ ಮನವಿಗಳೇನಾದರೂ ಸರ್ಕಾರಕ್ಕೆ ಬಂದಿದೆಯೇ?

ಆ) ಈ ರಸ್ತೆಯ ಮಾರ್ಗದ ಸುತ್ತಮುತ್ತಲು ಗ್ರಾಮಗಳಿದ್ದು, ರಸ್ತೆ ಕೆಟ್ಟಿರುವುದರಿಂದ ಈ ಹಿಂದೆ ಸಂಚರಿಸುತ್ತಿದ್ದ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ನಿಂತಿರುವುದರಿಂದ ಅಲ್ಲಿನ ಗ್ರಾಮಸ್ಥರಿಗೆ ಅನಾನುಕೂಲವಾಗಿರುವುದು ನಿಜವೆ ;

ಇ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಈ) ಪ್ರಸ್ತುತ ಆಯವ್ಯಯದಲ್ಲಿ ಸದರಿ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಂಡು ದುರಸ್ತಿಗೊಳಿಸಲು ಕ್ರಮಗಳೇನಾದರೂ ತೆಗೆದುಕೊಳ್ಳಲಾಗಿದೆಯೆ ;

ಉ) ಹಾಗಿದ್ದಲ್ಲಿ, ಎಂದಿನಿಂದ ದುರಸ್ತಿ ಕಾರ್ಯವನ್ನು ಪ್ರಾರಂಭಿಸಲಾಗಿದೆ; ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಮತ್ತು ಎಂದಿನಿಂದ ಕಾರ್ಯಾರಂಭಿಸಲಾಗುವುದು ;

ಊ) ಈ ರಸ್ತೆಯಲ್ಲಿ ಬರುವ ಅಡಿಕೆಕೆರೆ ಕೋಡಿಹಳ್ಳ, ಇಡಗೂರು ಕೋಡಿಹಳ್ಳ ಮತ್ತು ಬೋರ್ವನಹಳ್ಳಿ ಕೋಡಿಹಳ್ಳಕ್ಕೆ ಸೇತುವೆಯನ್ನು ನಿರ್ಮಾಣ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ;

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ಸದರಿ ರಸ್ತೆಯು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿದ್ದು ಲಭ್ಯವಿರುವ ಅನುದಾನದಲ್ಲಿ ಆದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಈ) ಇಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಸದರಿ ರಸ್ತೆಯಲ್ಲಿ ಮೂರು ಸೇತುವೆಗಳ ನಿರ್ಮಾಣ ಕಾಮಗಾರಿಯನ್ನು ತುಮಕೂರು ಜಿಲ್ಲಾಪರಿಷತ್ತಿನ 1993-94ರ ಆಯವ್ಯಯದಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ : (ಮಾನ್ಯ ಅಧ್ಯಕ್ಷರೇ, ಮೊದಲನೆಯ, (ಅ) ಪ್ರಶ್ನೆಗೆ ಬಂದಿದೆ ಎಂದು ಹೇಳಿದ್ದಾರೆ. (ಆ) ಪ್ರಶ್ನೆಯಲ್ಲಿ ಸುತ್ತಮುತ್ತ ಗ್ರಾಮಗಳಿದ್ದು ರಸ್ತೆ ಕೆಟ್ಟಿದೆ ಅಲ್ಲದೇ, ಬಸ್ ನಿಂತು ಹೋಗಿದೆಯೇ ಎಂದಿದ್ದಕ್ಕೆ ಹೌದು., ಎಂದು ಹೇಳಿದ್ದಾರೆ. ನಾನು ಈ ರಸ್ತೆ ವಿಚಾರವಾಗಿ 1986ನೇ ಇಸವಿಯಿಂದ ಈ ಮನೆಯೊಳಗೆ ಅರ್ಜಿ ಸಲ್ಲಿಸುತ್ತಿದ್ದೇನೆ ಮತ್ತು ಆ ಪ್ರಶ್ನೆಯನ್ನು ಕೇಳಿದ್ದೆ. 1986ನೇ ಇಸವಿಯಲ್ಲಿ ಪ್ರಶ್ನೆ ಕೇಳಿದಾಗ ಹಣಕಾಸು ಪರಿಸ್ಥಿತಿ ನೋಡಿ ಇದನ್ನು ಪಿಡಬ್ಲ್ಯೂಡಿಗೆ ಸೇರಿಸಿಕೊಳ್ಳುವುದಕ್ಕೆ ಯೋಜನೆ ಮಾಡಲಾಗುತ್ತದೆ ಎಂದು ಆಗಿನ ಪಿಡಬ್ಲ್ಯೂಡಿ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು.)

ಮತ್ತೆ ಊರಿನವರು ಅರ್ಜಿಯನ್ನು ಕೊಟ್ಟಿದ್ದರು, ತಮ್ಮ ಮೂಲಕ ರಸ್ತೆ ವಿಷಯ ಹೇಳಿದ್ದೆ. ಪಿಟಿಷನ್ ಕಮಿಟಿಯವರು ತೀರ್ಮಾನ ಮಾಡಿ ಆದಷ್ಟು ಬೇಗ ಈ ರಸ್ತೆಯನ್ನು ತೆಗೆದುಕೊಂಡು ಅದನ್ನು ಅಭಿವೃದ್ಧಿ ಪಡಿಸಬೇಕು ಎಂದು ಪಿಟಿಷನ್ ಕಮಿಟಿಯವರು ಆದೇಶ ಕೊಟ್ಟಿದ್ದರು. ಮತ್ತೆ ಈಗ ಕೇಳಿದಾಗ ಸದರಿ ರಸ್ತೆಯಲ್ಲಿ ಮೂರು ಸೇತುವೆಗಳ ನಿರ್ಮಾಣ ಕಾಮಗಾರಿಯನ್ನು ತುಮಕೂರು ಜಿಲ್ಲಾಪರಿಷತ್ತಿನ 1993-94ರ ಆಯವ್ಯಯದಲ್ಲಿ ಸೇರಿಸಲು ಕ್ರಮ ತಗೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ ಎಂದು ಹೇಳಿದ್ದಾರೆ. ಈ ರಸ್ತೆ ಕುಣಿಗಲ್ ಮತ್ತು ಗುಬ್ಬಿ ತಾಲ್ಲೂಕು ಈ ಎರಡೂ ತಾಲ್ಲೂಕುಗಳನ್ನು ಸೇರಿಸುವಂತಹ ರಸ್ತೆ ಆಗಿದೆ. ಕುಣಿಗಲ್ ಭಾಗದಲ್ಲಿ ಜಾಸ್ತಿ ಬರುತ್ತದೆ ಮತ್ತು ಗುಬ್ಬಿ ಭಾಗದಲ್ಲಿ ಸ್ವಲ್ಪ ಕಡಿಮೆ ಬರುತ್ತದೆ. ಈ ರಸ್ತೆ ಎರಡೂ ತಾಲ್ಲೂಕುಗಳನ್ನು ಸೇರಿಸುವ ರಸ್ತೆ ಆಗಿರುವುದರಿಂದ, ಈಗಲಾದರೂ ಮಾನ್ಯ ಮಂತ್ರಿಗಳು ಈ ಎರಡೂ ತಾಲ್ಲೂಕಿನ ಬಡ ಜನತೆಯ ಮೇಲೆ ಕನಿಕರ ಇಟ್ಟು ಈ ರಸ್ತೆಯನ್ನು ದುರಸ್ತಿ ಮಾಡುವುದಕ್ಕೆ ಆಗಲಿ ಅಥವಾ ಲೋಕೋಪಯೋಗಿ ಇಲಾಖೆಗೆ ಸೇರಿಸಿ ಇದನ್ನು ಇಂಪ್ರೂವ್ ಮಾಡಿಕೊಡುತ್ತಾರೆಯೆ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಹೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ : ಬಡ ಜನರ ಮೇಲೆ ಏಕೆ ಮಾನ್ಯ ಸದಸ್ಯರ ಮೇಲೆ ಕನಿಕರ ಇಟ್ಟು ಮಾಡಿಕೊಡಬಹುದಾಗಿತ್ತು. ಮಾನ್ಯ ಸದಸ್ಯರು ಏನು 50 ಕಿಲೋಮೀಟರ್ ರಸ್ತೆಯನ್ನು ಕೊಟ್ಟಿದ್ದಾರೆ, ಆದರಲ್ಲಿ ಇದು ಇಲ್ಲ. ಅದು ಇದ್ದಿದ್ದರೆ ಏಪ್ರಿಲ್ ತಿಂಗಳಿನಲ್ಲಿ ಕೊಟ್ಟಂತಹ ಗವರ್ನಮೆಂಟ್ ಆರ್ಡರ್‌ನಲ್ಲಿಯೇ ಅದು ಬಂದುಬಿಡುತ್ತಿತ್ತು. ಆದಾಗ್ಯೂ ಕೂಡ ಮಾನ್ಯ ಸದಸ್ಯರು ದೊಡ್ಡ ರಸ್ತೆ ಅಲ್ಲ, 11 ಕಿಲೋಮೀಟರ್ ಇರತಕ್ಕ ರಸ್ತೆ ಎಂದು ಹೇಳುತ್ತಿದ್ದಾರೆ. ಆದರೆ ಒಂದು ಅಂಶ ಏನು ಅಂದರೆ, ಇದು ಬಹಳ ಕಚ್ಚಾ ರಸ್ತೆ. ಆ ಪರಿಸ್ಥಿತಿಯಲ್ಲಿ ಇದೆ. ಹಾಗಾಗಿ ಫಾರ್ಮೇಷನ್ ಸ್ಟೇಜಿನಿಂದ ನಾವು ಮಾಡಬೇಕಾಗುತ್ತದೆ. ಫಾರ್ಮೇಷನ್ ಮಾಡಿ ಮಾಡಬೇಕಾಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ : ಫಾರ್ಮೇಷನ್ ಆಗಿದೆ.

ಶ್ರೀ ಕೆ. ಹೆಚ್. ರಂಗನಾಥ್ : ಫಾರ್ಮೇಷನ್ ಎಂದು ಹೇಳಿದರೆ ರಸ್ತೆ ಮಾಡತಕ್ಕ ಕ್ರಮ ಎಂದು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಏನು ಇದೆ, ಆ ತರಹ ಫಾರ್ಮೇಷನ್ ಮಾಡುವುದಿಲ್ಲ. ಹೇಗೆ ಫಾರ್ಮೇಷನ್ ಮಾಡುತ್ತಾರೆಂದು ತಮಗೂ ಗೊತ್ತಿದೆ , ಆ ಫಾರ್ಮೇಷನ್ ಆಗಿದೆ. ಇದನ್ನು ವ್ಯವಸ್ಥಿತವಾಗಿ ಮಾಡಬೇಕಾದರೆ ಸ್ವಲ್ಪ ಹಣ ಬೇಕಾಗುತ್ತದೆ. ಆದಾಗ್ಯೂ ಕೂಡ ಮೂರು ಸೇತುವೆಗಳು ಬರುತ್ತವೆ ಎಂದು ಏನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಅದು ಬಹಳ ಮುಖ್ಯವಾಗಿರತಕ್ಕದ್ದು. ಅದಕ್ಕೆ ನಾವು ಜಿಲ್ಲಾಪರಿಷತ್ತಿಗೆ ಈಗಾಗಲೇ ಆ ಹಣದಲ್ಲಿ ಮೊದಲು ಸೇತುವೆ ಮಾಡಿ ಎಂದು ಆದೇಶ ಕೊಟ್ಟಿದ್ದೇವೆ. ಒಂದು ವೇಳೆ ಅವರು ಮಾಡದೇ ಹೋದರೆ ನಾನು ತಮಗೆ ಸ್ಪೆಷಲ್ ಆಗಿ ಮಾಡಿಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಿದ್ದಯ್ಯನವರೇ, ತಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಒಂದು ವಾರ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಅಚ್ಚುಕಟ್ಟು ಪ್ರದೇಶದ ಮಂತ್ರಿಗಳು ಏಕೆ ಬಂದಿಲ್ಲ ಸ್ವಾಮಿ. ಅವರ ಆಪ್ತ ಕಾರ್ಯದರ್ಶಿಗಳನ್ನು ಏನೋ ಅರೆಸ್ಟ್ ಮಾಡಿದ್ದಾರೆಂದು ಪೇಪರ್‌ನಲ್ಲಿ ಬಂದಿದೆ ಅದಕ್ಕೆ ಸಂಬಂಧಪಟ್ಟಂತೆ ಬಂದಿಲ್ಲವೇ? ಅವರು ತಮಗೆ ಏನಾದರೂ ತಿಳಿಸಿದ್ದಾರೆಯೇ?

ಅಧ್ಯಕ್ಷರು : ಲೆಟರ್ ಕಳಿಸಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್ : ಅವರ ಮಗನ ಮದುವೆ ಇದೆ.

ವಿಷಯ : ಯಗಚಿ ನೀರಾವರಿ ಪ್ರದೇಶದಲ್ಲಿ ಏತ ನೀರಾವರಿ ಯೋಜನೆಗಳು.

Q : 1717

ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಗಚಿ ನದಿಗೆ ಅಡ್ಡಗಟ್ಟೆ ಕಟ್ಟುವುದರಿಂದ ಒಟ್ಟು ಎಷ್ಟು ಎಕರೆ ಭೂಮಿ ನೀರಾವರಿಗೆ ಒಳಗಾಗುತ್ತದೆ ಮತ್ತು ಯಾವ ಯಾವ ತಾಲ್ಲೂಕುಗಳಲ್ಲಿ?

ಆ) ಯಗಚಿ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಎಷ್ಟು ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದೆ ಮತ್ತು ಅವುಗಳಿಂದ ನೀರಾವರಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶವೆಷ್ಟು?

ಇ) ಏತ ನೀರಾವರಿ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಯಗಚಿ ನದಿಗೆ ಅಡ್ಡಗಟ್ಟೆ ಕಟ್ಟುವುದರಿಂದ ಒಟ್ಟು 53,000 ಎಕರೆ ಭೂಮಿ ನೀರಾವರಿಗೆ ಒಳಗಾಗುತ್ತದೆ. ಇದರ ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ.

1.	ಬೇಲೂರು	6680 ಎಕರೆ
2.	ಆಲೂರು	2400 ಎಕರೆ
3.	ಹಾಸನ	36190 ಎಕರೆ
4.	ಹೊಳೆನರಸೀಪುರ	7730 ಎಕರೆ
	ಒಟ್ಟು	53000 ಎಕರೆ

ಆ) ಯಗಚಿ ಅಚ್ಚುಕಟ್ಟು ಪ್ರದೇಶದಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಗಳು ಹಾಗೂ ಅವುಗಳಿಂದ ನೀರಾವರಿ ಆಗುವ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣಗಳು ಈ ಕೆಳಕಂಡಂತಿದೆ.

1. ಆಂಜನೇಯಪುರ ಏತ ನೀರಾವರಿ ಯೋಜನೆ. 14,904 ಎಕರೆ